# ಶ್ರೀಮದ್ಭಾಗವತ ಸಾರ



ಎ. ಮುರಳೀಧರ

## ಆರನೆಯ ಸ್ಕಂಧ

**ಅಜಾಮಿಳ:** ಬ್ರಾಹ್ಮಣ ದಂಪತಿಗಳಿಗೆ ಪುತ್ರನಾಗಿ ಜನಿಸಿದ ಅಜಾಮಿಳನು, ಆ ಕುಟುಂಬದ ಪರಂಪರೆಯಂತೆ ಧರ್ಮಿಷ್ಠನಾಗಿ ಸಕಲ ವಿದ್ಯಾಪಾರಂಗತನಾಗಿದ್ದನು. ವಿದ್ಯೆಗೆ ವಿನಯವೇ ಭೂಷಣವೆಂಬಂತೆ ಗುರುಹಿರಿಯರಲ್ಲಿ ಯಾವಾಗಲೂ ಆದರದಿಂದ ಇದ್ದನು. ದ್ವೇಷಾಸೂಯೆಗಳು ತನ್ನ ಹತ್ತಿರವೂ ಸುಳಿಯದಂತೆ ಎಚ್ಚರವಹಿಸಿದ್ದನು.

ಒಂದು ದಿನ ಅಜಾಮಿಳನು ತಂದೆಯ ಹೋಮಹವನಗಳಿಗಾಗಿ ದರ್ಭೆ, ಸಮಿತ್ತು, ಹೂವು, ತುಳಸಿಗಳನ್ನು ತರಲು ಅಡವಿಗೆ ಹೋದನು. ಅವುಗಳನ್ನು ಸಂಗ್ರಹಿಸಿ ಹಿಂತಿರುಗುತ್ತಿದ್ದಾಗ ಅಡವಿಯಲ್ಲಿ ವಾಸವಿದ್ದ ದಂಪತಿಯರು ಅಶ್ಲೀಲವಾಗಿ ಹಗಲುಹೊತ್ತಿನಲ್ಲಿ ಸರಸವಾಡುತ್ತಿದ್ದುದನ್ನು ಕಂಡನು. ತರುಣನಾದ ಅಜಾಮಿಳನು ಇಂತಹ ಉನ್ಮತ್ತ ಸ್ಥಿತಿಯಲ್ಲಿದ್ದ ಸ್ತ್ರೀಯನ್ನು ನೋಡಿರಲೇ ಇಲ್ಲ. ಆಕೆಯ ಅಂಗಾಂಗಗಳನ್ನು ನೋಡಿದಮೇಲಂತೂ, ಬ್ರಹ್ಮಚಾರಿಯಾಗಿದ್ದ ಆತನ ಮನಸ್ಸು ಲಂಗುಲಗಾಮಿಲ್ಲದೆ ಹಿಡಿತ ತಪ್ಪಿತು. ಅವಳಿಗೆ ಸಂಪೂರ್ಣವಾಗಿ ಮನಸೋತನು.

ಮನೆಗೆ ಹಿಂತಿರುಗಿದ ಅಜಾಮಿಳನ ಮನಸ್ಸಿನಲ್ಲಿ ಆ ಹೆಣ್ಣಿನ ರೂಪವೇ ತುಂಬಿತ್ತು. ಗುರುಗಳ ಉಪದೇಶವನ್ನು ನೆನಪುಮಾಡಿಕೊಂಡನಾದರೂ, ಆತನ ಮನಸ್ಸು ಆಕೆಯ ಮೋಹಪಾಶದಿಂದ ಹೊರಬರಲೇ ಇಲ್ಲ. ಹಗಲಿರುಳೂ ಅವಳ ನೆನಪಲ್ಲೇ ಇರುತ್ತಿದ್ದನು. ನಿತ್ಯಕರ್ಮಗಳಾದ ಸ್ನಾನ, ಸಂಧ್ಯಾವಂದನೆ, ಜಪ-ತಪ – ಎಲ್ಲವನ್ನೂ ಬಿಟ್ಟುಬಿಟ್ಟನು. ಯಾರಿಗೂ ಹೇಳದೇ ಅರಣ್ಯಕ್ಕೆ ಹಿಂತಿರುಗಿ ಅವಳಲ್ಲಿ ಪ್ರೇಮಭಿಕ್ಷೆ ಬೇಡಿದನು. ಯುವಕ ಬ್ರಾಹ್ಮಣನ ಮಾತಿನ ಮೋಡಿಗೆ ಒಲಿದು ಆಕೆಯು ಅವನೊಂದಿಗೆ ಸಂಸಾರ ಹೂಡಿದಳು. ಕಾಲಕ್ರಮೇಣ ತಂದೆಯ ಆಸ್ತಿಯೆಲ್ಲವೂ ಕರಗಿತು. ಉದರ ಪೋಷಣೆಗಾಗಿ ವ್ಯಾಪಾರದಲ್ಲಿ ತೊಡಗಿದನಾದರೂ ನಷ್ಟವುಂಟಾಗಿ ಕಂಗಾಲಾದನು. ಮುಂದೆ, ಸಂಸಾರ ನಿರ್ವಹಿಸಲು ಕಳ್ಳತನ, ಜೂಜಾಡುವುದು ಇತ್ಯಾದಿ ಅನೈತಿಕ ಕಾರ್ಯಗಳಲ್ಲಿ ತೊಡಗಿಕೊಂಡನು. ಆ ಮಹಿಳೆಯಿಂದ ಹತ್ತು ಮಂದಿ ಮಕ್ಕಳನ್ನು ಪಡೆದನು. ವಾತ್ಸಲ್ಯದಿಂದ ತನ್ನ ಕೊನೆಯ ಮಗನಿಗೆ 'ನಾರಾಯಣ' ಎಂದು ಹೆಸರಿಟ್ಟನು.

ಕಾಲಚಕ್ರ ಉರುಳಿದಂತೆ, ಅಜಾಮಿಳನಿಗೂ ಮುಪ್ಪು ಸಮೀಪಿಸಿ ದೇಹವು ಜರ್ಝರಗೊಂಡಿತು. ಅನೇಕ ವ್ಯಾಧಿಗಳು ಬಂದವು. ತನ್ನ ಕೊನೆಯ ಪುತ್ರನ ಮೇಲಿನ ವ್ಯಾಮೋಹದಿಂದಾಗಿ ಯಾವಾಗಲೂ ಸಣ್ಣ-ಪುಟ್ಟ ಕಾರ್ಯಗಳಿಗೆಲ್ಲ, 'ನಾರಾಯಣ, ನಾರಾಯಣ' ಎನ್ನುತ್ತ ಆತನನ್ನೇ ಆಶ್ರಯಿಸತೊಡಗಿದನು. ಎಲ್ಲಿ ಹೋದರೂ ಆತನನ್ನು ತನ್ನ ಜೊತೆಯಲ್ಲಿಯೇ ಕರೆದುಕೊಂಡು ಹೋಗುತ್ತಿದ್ದನು.

ಹೀಗೊಂದು ದಿನ, ಭಯಂಕರ ವೇಷದ ಯಮದೂತರು ಅಜಾಮಿಳನ ಕೊರಳಿಗೆ ಯಮಪಾಶ ಹಾಕಲು ಬಂದರು. ಅವರನ್ನು ಕಂಡು ಭಯದಿಂದ ತನ್ನ ಮಗನನ್ನು ಕುರಿತು, 'ನಾರಾಯಣ, ನಾರಾಯಣ' ಎಂದು ಕೂಗಿದನು. ಅಷ್ಟರಲ್ಲಿ ವಿಷ್ಣುದೂತರು ಬಂದು, "ನೀವು ಅಜಾಮಿಳನನ್ನು ಕರೆದೊಯ್ಯುವಂತಿಲ್ಲ. ಆತನು ಕಡೆಯ ಗಳಿಗೆಯಲ್ಲಿ ಭಗವಂತನನ್ನು ಸ್ಮರಿಸಿದ್ದರಿಂದ, ವೈಕುಂಠಲೋಕಕ್ಕೆ ಅರ್ಹನಾಗಿದ್ದಾನೆ" ಎಂದರು. ವಿಷ್ಣುದೂತರ ಮಾತಿಗೆ ಬೆಲೆಕೊಟ್ಟ ಯಮದೂತರು ಅಜಾಮಿಳನನ್ನು ಬಿಟ್ಟುಬಿಟ್ಟರು.

ಈ ಸಂವಾದವನ್ನು ಕೇಳಿ ಅಜಾಮಿಳನಿಗೆ, 'ತಾನು ಹೇಗಿದ್ದೆನು, ಈಗ ಹೇಗಾಗಿದ್ದೇನೆ' ಎನ್ನುವುದರ ಅರಿವಾಗಿ ತನ್ನ ಜೀವನದ ಬಗ್ಗೆಯೇ ಜುಗುಪ್ಸೆ ಮೂಡಿತು. ಭಗವಂತನ ನಾಮಸ್ಮರಣೆಯೊಂದೇ ತನ್ನನ್ನು ಉದ್ಧರಿಸಬಲ್ಲದು ಎಂದು ಅವನು ತೀರ್ಮಾನಿಸಿ, ಗಂಗಾನದಿಯ ತೀರಕ್ಕೆ ಬಂದನು. ಅಲ್ಲಿ ಸಜ್ಜನರ ಸಹವಾಸದಿಂದ ವೈರಾಗ್ಯ ತಾಳಿದನು. ಭಕ್ತಿಯೋಗವನ್ನು ಅಭ್ಯಾಸ ಮಾಡಿದನು. ತನ್ನ ಮನಸ್ಸು ಮತ್ತು ಇಂದ್ರಿಯಗಳನ್ನು

ನಿಗ್ರಹಿಸಿದನು. ಶ್ರೀಮನ್ನಾರಾಯಣನನ್ನೇ ಧ್ಯಾನಿಸುತ್ತ ಮುಕ್ತಿಯನ್ನು ಹೊಂದಿ ವಿಷ್ಣುಸಾನ್ನಿಧ್ಯವನ್ನು ಪಡೆದನು.

**ವೃತ್ರಾಸುರನ ವಧೆ:** ದೇವೇಂದ್ರನು ದೈತ್ಯರ ಆಕ್ರಮಣದ ಭಯವಿಲ್ಲದೆ ನಿರಾತಂಕನಾಗಿ, ವೈಭವದಿಂದ ಅಮರಾವತಿಯನ್ನು ಆಳುತ್ತಿದ್ದನು. ಒಮ್ಮೆ ತನ್ನ ಸಮಾನರಾರೂ ಇಲ್ಲವೆಂಬ ಅಹಂಕಾರ ಅವನಿಗೆ ಬಂದಿತು. ಒಂದು ದಿನ ರಾಜಸಭೆಯಲ್ಲಿ ಅಧಿಕಾರದ ಅಮಲಿನಲ್ಲಿ ಸಿಂಹಾಸನದ ಮೇಲೆ ಕುಳಿತಿದ್ದನು. ಆ ರಾಜಸಭೆಯಲ್ಲಿ ಸಪ್ತಋಷಿಗಳು, ಅಶ್ವಿನಿ ದೇವತೆಗಳು, ಅಷ್ಟವಸುಗಳು ಮುಂತಾದ ಪ್ರಮುಖರು ಇದ್ದರು. ಭಟರು ಇಂದ್ರನನ್ನು ಹಾಡಿ ಹೊಗಳುತ್ತಿದ್ದರು. ಇದರಿಂದಾಗಿ ದೇವೇಂದ್ರನ ಅಹಂಕಾರ ಮತ್ತಷ್ಟು ಹೆಚ್ಚಾಯಿತು. ಆ ಸಂದರ್ಭದಲ್ಲಿ ದೇವತೆಗಳ ಗುರುಗಳಾದ ಬೃಹಸ್ಪತ್ಯಾಚಾರ್ಯರು ಸಭಾಗೃಹವನ್ನು ಪ್ರವೇಶಿಸಿದರು. ಅಹಂಕಾರದ ಮದದಿಂದ ಇಂದ್ರನು ಗುರುಗಳಿಗೆ ಸರಿಯಾದ ಸತ್ಕಾರ ನೀಡಲಿಲ್ಲ ಮತ್ತು ಗೌರವದಿಂದ ಕಾಣಲಿಲ್ಲ. ಇದರಿಂದ ಬೃಹಸ್ಪತ್ಯಾಚಾರ್ಯರು ಬಹಳವಾಗಿ ನೊಂದುಕೊಂಡರು. ಅಪಮಾನಗೊಂಡು, ಮೌನವಾಗಿ ಹಿಂತಿರುಗಿದರು.

ಗುರುಗಳ ನಿರ್ಗಮನದಿಂದ ಇಂದ್ರನಿಗೆ ಬಹಳ ಕಸಿವಿಸಿಯಾಯಿತು. ತನ್ನಿಂದಾದ ಪ್ರಮಾದದ ಅರಿವಾಯಿತು. ದೇವಗುರುಗಳನ್ನು ಆದರಿಸಿ ಸತ್ಕರಿಸದೆ ಅವಮಾನ ಮಾಡಿದ್ದು ದೊಡ್ಡ ಅಪರಾಧವಾಯಿತೆಂದು ತಿಳಿದನು. ಮುಂದೆ ಏನಾಗುವುದೋ ಎಂದು ಹೆದರಿ, ಗಡಗಡ ನಡುಗಿದನು. ತಕ್ಷಣ ದೇವಗುರುಗಳನ್ನು ಕಾಣಲು ಅವರ ಆಶ್ರಮಕ್ಕೆ ಬಂದನು. ಇಂದ್ರನು ಬರುತ್ತಿರುವ ವಿಷಯ ತಿಳಿದ ಗುರುಗಳು ಅಲ್ಲಿಂದ ಅದೃಶ್ಯರಾದರು. ಆಶ್ರಮದಲ್ಲಿ ಗುರುಗಳನ್ನು ಹುಡುಕಿದ ಇಂದ್ರನು ಅವರನ್ನು ಕಾಣದೆ ಹತಾಶನಾಗಿ ಹಿಂತಿರುಗಿದನು.

ದೇವಗುರುಗಳ ಅವಕೃಪೆಗೆ ಒಳಗಾಗಿದ್ದ ದೇವೇಂದ್ರನು ದೈಹಿಕವಾಗಿ, ಮಾನಸಿಕವಾಗಿ ಕುಗ್ಗಿ ಹೋದನು. ಇದರ ಸುಳಿವು ತಿಳಿದ ದೈತ್ಯರು ಇದೇ ಸರಿಯಾದ ಸಮಯವೆಂದು ಇಂದ್ರನ ನಗರಿಯಾದ ಅಮರಾವತಿಯನ್ನು ಮುತ್ತಿದರು. ದೇವತೆಗಳಿಗೂ ದೈತ್ಯರಿಗೂ ಭೀಕರ ಕಾಳಗವಾಯಿತು. ದೇವತೆಗಳು ದಾನವರಿಂದ ಯುದ್ಧದಲ್ಲಿ ಹೀನಾಯವಾಗಿ ಸೋತರು. ಇಂದ್ರನು ದೈತ್ಯರಿಗೆ ಶರಣಾದನು.

ನಂತರ ಇಂದ್ರನು ದೇವತೆಗಳನ್ನು ಕರೆದುಕೊಂಡು ಬ್ರಹ್ಮದೇವರನ್ನು ಮೊರೆಹೊಕ್ಕನು. ಬ್ರಹ್ಮದೇವರು ಇಂದ್ರನಿಗೆ ಹೀಗೆ ಹೇಳಿದರು: "ಎಲೈ ಇಂದ್ರ, ಗುರುಶಾಪದಿಂದ ನಿನಗೆ ಈ ಗತಿಯು ಬಂದಿದೆ. ದೈತ್ಯರು ಕೆಟ್ಟವರೇನೋ ಸರಿ. ಆದರೆ ಗುರುಗಳನ್ನು ದೇವರಂತೆ ಪೂಜಿಸಿ ಗೌರವಿಸುತ್ತಾರೆ. ಆ ಗುರುಬಲವೇ ಅವರಿಗೆ ಸಿಂಹಬಲ ತಂದುಕೊಟ್ಟಿದೆ. ಈಗ ಏನೂ ಮಾಡಲು ಸಾಧ್ಯವಿಲ್ಲ. ನೀವು ಕೆಲವು ಕಾಲ ನಿನ್ನ ಕಷ್ಟಗಳನ್ನು ಸಹಿಸಲೇಬೇಕು. ವಿಶ್ವರೂಪನೆಂಬ ಮಹಾತೇಜಸ್ವಿಯೂ, ತಪಸ್ವಿಯೂ ಆದ ಒಬ್ಬ ಬ್ರಾಹ್ಮಣನಿದ್ದಾನೆ. ನೀವು ಆತನನ್ನು ಈ ಕೂಡಲೇ ಕಂಡು ನಿಮ್ಮ ಪುರೋಹಿತನನ್ನಾಗಿ ಮಾಡಿಕೊಳ್ಳಿರಿ. ಅವನಿಂದ ನಿಮಗೆ ಕಲ್ಯಾಣವಾಗುವುದು." ದೇವತೆಗಳು ಅದೇ ರೀತಿ ಮಾಡಿದರು.

ದೇವತೆಗಳ ಪ್ರಾರ್ಥನೆಗೆ ಸಂತಸಗೊಂಡ ವಿಶ್ವರೂಪನು ಅವರಿಗೆ ಸಹಾಯ ಮಾಡಲು ಸಮ್ಮತಿಸಿದನು; ಇಂದ್ರನಿಗೆ ಶಕ್ತಿ ತುಂಬಲು 'ನಾರಾಯಣ ಕವಚ' ಎಂಬ ಮಂತ್ರವನ್ನು ಅವನಿಗೆ ಬೋಧಿಸಿದನು. ನಾರಾಯಣ ಕವಚ ಮಂತ್ರವನ್ನು ಇಂದ್ರನು ಶ್ರದ್ಧೆಯಿಂದ ಕಲಿತು ಬಲಶಾಲಿಯಾದನು. ದೈತ್ಯರನ್ನು ಯುದ್ಧದಲ್ಲಿ ಹಿಮ್ಮೆಟ್ಟಿಸಿದನು.

ವಿಶ್ವರೂಪನ ತಂದೆ ದೇವಕುಲದವನು; ತಾಯಿ ದೈತ್ಯ ಕುಲದವಳು. ವಿಶ್ವರೂಪನು ಸೋಮ ಹವನದಲ್ಲಿ ದೇವತೆಗಳಿಗೆ ಹವಿಸ್ಸನ್ನು ಕೊಡುವಾಗ, ದೈತ್ಯರ ಮೇಲಿನ ಪ್ರೀತಿಯಿಂದ ಅವರಿಗೂ ಭಾಗವನ್ನು ಕೊಡುತ್ತಿದ್ದನು. ಈ ವಿಷಯ ಇಂದ್ರನಿಗೆ ತಿಳಿದಾಗ, ಕೋಪಗೊಂಡು ಹಿಂದು-ಮುಂದು ನೋಡದೆ ವಿಶ್ವರೂಪನ ಶಿರಸ್ಸನ್ನು ಕತ್ತರಿಸಿಹಾಕಿದನು.

ವಿಶ್ವರೂಪನ ಸಂಹಾರದ ವಾರ್ತೆ ತಿಳಿದ ಅವನ ತಂದೆ ತ್ವಷ್ಟೃವು ಕೋಪಗೊಂಡನು. ಇಂದ್ರನನ್ನು ಸಂಹರಿಸುವ ಪುತ್ರನನ್ನು ಪಡೆಯಲು ಒಂದು ಮಹಾಯಾಗವನ್ನು ಮಾಡಿದನು. "ಇಂದ್ರನ ಸಂಹಾರ ಮಾಡುವ ಮಗನೇ, ಅಗ್ನಿಯಿಂದ ಎದ್ದು ಬಾ" ಎಂದು ಕೂಗಿದನು. ಆಗ ಮೂರೂ ಲೋಕಗಳೂ ನಡುಗುವಂತೆ ಕ್ರೂರ ಧ್ವನಿಯಿಂದ ಚೀರುತ್ತಾ, ಭಯಂಕರವಾದ ವಿಕಾರರೂಪವುಳ್ಳ ದೈತ್ಯನೊಬ್ಬನು ಎದ್ದುಬಂದನು. ಇವನು ಇಡೀ ಲೋಕವನ್ನೇ ನುಂಗುತ್ತಾ ಸಾಗಿದ್ದರಿಂದ ಇವನಿಗೆ 'ವೃತ್ರಾಸುರ'ನೆಂಬ ಹೆಸರಾಯಿತು.

ವೃತ್ರಾಸುರನು ನೇರವಾಗಿ ಅಮರಾವತಿಯನ್ನು ನುಂಗಲು ಸಾಗಿದನು. ದೇವತೆಗಳು ಅಸ್ತ್ರಗಳಿಂದ ಅವನನ್ನು ಎದುರಿಸಿದರು. ದೇವತೆಗಳ ಅಸ್ತ್ರ-ಶಸ್ತ್ರಗಳಿಂದ ಏನೂ ಆಗಲಿಲ್ಲ. ಅವರ ಎಲ್ಲ ಅಸ್ತ್ರಗಳನ್ನೂ ವೃತ್ರಾಸುರನು ನುಂಗಿ ಹಾಕಿದನು. ಇದರಿಂದ ಕಂಗಾಲಾದ ದೇವತೆಗಳು ಶ್ರೀಮನ್ನಾರಾಯಣನ ಬಳಿಗೆ ಬಂದರು. ನಾರಾಯಣನು, "ದೇವತೆಗಳೇ, ನಾನು ಈಗ ಬರಲಾರೆನು. ಆದರೆ, ನೀವು ದಧೀಚಿ ಋಷಿಯ ಬಳಿಗೆ ತೆರಳಿರಿ. ಅವನೂ ಸಹ ನಾರಾಯಣ ಕವಚ ಮಂತ್ರವನ್ನು ಸಿದ್ಧಿಸಿಕೊಂಡು ತನ್ನ ಶರೀರವನ್ನು ಬಲಯುತವನ್ನಾಗಿ ಮಾಡಿಕೊಂಡಿದ್ದಾನೆ. ಅವನ ದೇಹವನ್ನು ನೀವು ಭಿಕ್ಷೆ ಬೇಡಿರಿ. ಅವನು ದೇವತೆಗಳಿಗಾಗಿ ತನ್ನ ದೇಹವನ್ನು ಕೊಡುವನು" ಎಂದನು. ದೇವತೆಗಳು ಹಾಗೆಯೇ ಮಾಡಿದರು. ದೇವತೆಗಳು ತನ್ನ ದೇಹವನ್ನು ಕೇಳಿದಾಗ ಸಂತೋಷದಿಂದಲೇ ದಧೀಚಿಯು ಒಪ್ಪಿದನು. ಅವನ ದೇಹದ ಮೂಳೆಯಿಂದ ಇಂದ್ರನು ವಜ್ರಾಯುಧವನ್ನು ತಯಾರಿಸಿದನು; ಈ ವಜ್ರಾಯುಧದಿಂದ ವೃತ್ರಾಸುರನನ್ನು ಸಂಹರಿಸಿದನು.